# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1369
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ದಿನಾಂಕ : 24-12-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ ಜಿಲ್ಲೆಯಲ್ಲಿ 2019-20 ರಿಂದ 2020-21 ರವರೆಗೆ ಮೊರಾರ್ಜಿ ವಸತಿ ಶಾಲೆ/ ಕಾಲೇಜುಗಳು ಪ್ರಾರಂಭಿಸಲಾಯಿತೆ; ಪ್ರಾರಂಭಿಸಿದ್ದಲ್ಲಿ ಪಾಠ ಪ್ರವಚನ ನಡೆಸಲಾಗುತ್ತಿದೆಯೇ; ಶಾಲಾ ಕಾಲೇಜುವಾರು ಮಾಹಿತಿ ನೀಡುವುದು; | ಬೀದರ ಜಿಲ್ಲಾ ವ್ಯಾಪ್ತಿಯಲ್ಲಿ 29 ವಸತಿ ಶಾಲಾ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 2019-20 ಶೈಕ್ಷಣಿಕ ಸಾಲಿನಲ್ಲಿ ಮಾರ್ಚ್ ಅಂತ್ಯದವರೆಗೆ ಪಾಠ ಪ್ರವಚನ ನಡೆಸಲಾಗಿದ್ದು, ನಂತರ ಕೋವಿಡ್ ಹಿನ್ನಲೆಯಲ್ಲಿ ಲಾಕ್ ಡೌನ್ ನಿಮಿತ್ಯ ವಸತಿ ಶಾಲೆಗಳನ್ನು ತೆರೆದಿರುವುದಿಲ್ಲ. 2020-21 ನೇ ಸಾಲಿನಲ್ಲಿ ಆನ್‌ಲೈನ (ವಿದ್ಯಾಗಮ) ಮೂಲಕ ತರಗತಿಗಳನ್ನು ನಡೆಸಲಾಗಿದೆ ಅಲ್ಲದೇ ದಿನಾಂಕ 01.01.2021ರಿಂದ ಭೌತಿಕವಾಗಿ ತರಗತಿಗಳನ್ನು ಪ್ರಾರಂಭಿಸಿ ಪಾಠ ಪ್ರವಚನ ನೀಡಲಾಗಿದೆ, ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ. |

| ಕ್ರ,ಸಂ | ತರಗತಿ | ಪ್ರಾರಂಭಿಸಿದ ದಿನಾಂಕ |
|---|---|---|
| 1 | 10 ಮತ್ತು 12 ನೇ ತರಗತಿ | 01.01.2021 |
| 2 | 9 ಮತ್ತು 11 ನೇ ತರಗತಿ | 01.02.2021 |
| 3 | 7 ಮತ್ತು 8ನೇ ತರಗತಿ | 22.02.2021 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಜಿಲ್ಲೆಗೆ ಈ ಶಾಲಾ/ಕಾಲೇಜುಗಳಿಗೆ 2019-20 ರಿಂದ 2020-21 ನೇ ಸಾಲಿನಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ. ಎಷ್ಟು ಖರ್ಚು ಮಾಡಲಾಗಿದೆ. (ಶಾಲಾ-ಕಾಲೇಜುವಾರು ಮಾಹಿತಿ ನೀಡುವುದು) | ಬೀದರ ಜಿಲ್ಲೆಯಲ್ಲಿನ ವಸತಿ ಶಾಲಾ/ಕಾಲೇಜುಗಳಿಗೆ 2019-20 ರಿಂದ 2020-21 ರವರೆಗೆ ಬಿಡುಗಡೆಯಾಗಿ ಖರ್ಚಾದ ಅನುದಾನದ ವಿವರಗಳನ್ನು ಅನುಬಂಧ-01 ರಲ್ಲಿ ನೀಡಿದೆ. |
| ಇ) | ಈ ವಸತಿ ಶಾಲಾ-ಕಾಲೇಜುಗಳಿಗೆ ಆಹಾರ ಸರಬರಾಜು ಟೆಂಡರ್ ಅವಧಿ ಮುಗಿದು ಅನೇಕ ತಿಂಗಳುಗಳೇ ಕಳೆದರೂ ಇನ್ನೂ ಹೊಸ ಟೆಂಡರ್ ಕರೆಯದಿರಲು ಕಾರಣವೇನು; ಹೊಸ ಟೆಂಡರ್ ಕರೆಯುವುದು ಯಾವಾಗ? | ಪ್ರಸಕ್ತ ಸಾಲಿನಲ್ಲಿ ವಸತಿ ಶಾಲಾ-ಕಾಲೇಜುಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಇ-ಪೋರ್ಟಲ್ ಮೂಲಕ ಜಿಲ್ಲಾವಾರು ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. |

**ಸಂಖ್ಯೆ: ಸಕಇ 568 ಮೊದೇಶಾ 2021**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.